**ಓ ಎಸ್ 24/2023 ಪಿಡಬ್ಲ್ಯೂ 1**

**ಸಾಕ್ಷಿಯನ್ನು ದಿಃ 12.12.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ಶ್ರೀ ಕೆ ಎಂ ಆರ್ ವಕೀಲರಿಂದಃ**

ನಾನು ಡಿಪ್ಲೊಮೋ ಓದಿದ್ದೇನೆ. ಕೆ.ಎನ್.ಗೋಪಾಲಸ್ವಾಮಿರವರು ನಾನು ಹುಟ್ಟಿದಾಗಿನಿಂದಲೂ ಪರಿಚಯ. ಕೆ.ಎನ್.ಗೋಪಾಲಸ್ವಾಮಿರವರು ವಿದ್ಯಾವಂತರಾಗಿದ್ದರು ಎಂದರೆ ಸರಿ. ದಾವಾ ಆಸ್ತಿಯು ಕೆ.ಎನ್ ಗೋಪಾಲಸ್ವಾಮಿರವರು ಸ್ವಯಾರ್ಜಿತವಾಗಿ ಕ್ರಯಕ್ಕೆ ಪಡೆದಿರುವ ಸ್ವತ್ತಾಗಿದೆ. ಕೆ.ಎನ್ ಗೋಪಾಲಸ್ವಾಮಿರವರು ವಿದ್ಯಾವಂತರಾಗಿರುವ ಕಾರಣ ಅವರ ಕ್ರಯಪತ್ರದಲ್ಲಿನ ಸಂಗತಿಗಳು ಅವರಿಗೆ ಗೊತ್ತಿರುತ್ತವೆ ಎಂದರೆ ಸರಿ. ಕೆ.ಎನ್.ಗೋಪಾಲಸ್ವಾಮಿ ಯವರಿಗೆ ದಾವಾ ಆಸ್ತಿಯು ಯಾವ ದಿನಾಂಕದ ಕ್ರಯಪತ್ರದ ಮೂಲಕ ಬಂದಿತು ಎಂದು ನಿಶಾನೆ ಪಿ 1 ಮತ್ತು 2 ರಲ್ಲಿರುವ ಕ್ರಯದ ಕರಾರು ಪತ್ರ ಹಾಗೂ ಕ್ರಯದ ಕರಾರಿನ ಪೂರಕ ಕ್ರಯಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ನಿಶಾನೆ ಪಿ 1 ಮತ್ತು 2 ರ ಆಧಾರದ ಮೇಲೆ ಕ್ರಯಪತ್ರವನ್ನು ಬರೆದುಕೊಡುವಂತೆ ಕೆ.ಎನ್. ಗೋಪಾಲಸ್ವಾಮಿರವರನ್ನು ಮೌಖಿಕವಾಗಿ ಹಲವಾರು ಬಾರಿ ಕೇಳಿದ್ದೇವೆ, ಆದರೆ ನಿಶಾನೆ ಪಿ 1 ಮತ್ತು 2 ಲಿಖಿತ ರೂಪದಲ್ಲಿಯೇ ಇರುವ ಕಾರಣ ಲಿಖಿತ ನೋಟೀಸು ಮೂಲಕ ಲಿಖಿತ ನೋಟೀಸು ನೀಡಿ ಕ್ರಯಪತ್ರ ಬರೆದುಕೊಡುವಂತೆ ಕೇಳಿಲ್ಲ. ಲಿಖಿತ ರೂಪದಲ್ಲಿ ನೋಟೀಸು ನೀಡಿ ಕ್ರಯಪತ್ರ ಬರೆದುಕೊಡುವಂತೆ ಕೆ.ಎನ್. ಗೋಪಾಲಸ್ವಾಮಿರವರನ್ನು ಕೇಳಲು ನಮಗೆ ಯಾವುದೇ ತೊಂದರೆ ಇರಲಿಲ್ಲ. ನಿಶಾನೆ ಪಿ 1 ಮತ್ತು 2 ರ ಆಧಾರದ ಮೇಲೆ ಕ್ರಯಪತ್ರ ಬರೆದುಕೊಡುವಂತೆ ಕೆ.ಎನ್. ಗೋಪಾಲಸ್ವಾಮಿರವರನ್ನು ನಾನು ಮೌಖಿಕವಾಗಿಯೂ ಸಹ ಕೇಳದೆ ಇದದರೂ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಕೆ.ಎನ್. ಗೋಪಾಲಸ್ವಾಮಿರವರು ನನ್ನಿಂದ ವೈಯಕ್ತಿಕವಾಗಿ ಆರ್ ಟಿ ಜಿ ಎಸಿ ಮೂಲಕ ಸಾಲ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಸಾಲದ ಭದ್ರತೆಗಾಗಿ ಕೆ.ಎನ್. ಗೋಪಾಲಸ್ವಾಮಿರವರಿಂದ ಖಾಲಿ ಪತ್ರಗಳಿಗೆ ಸಹಿ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ನಿಶಾನೆ ಪಿ 1 ಮತ್ತು 2 ರಲ್ಲಿ ಹೇಳಿರುವ ಹಾಗೆ ಕೆ.ಎನ್. ಗೋಪಾಲಸ್ವಾಮಿರವರು ನನ್ನಿಂದ ನಗದು ರೂಪದಲ್ಲಿ ಯಾವುದೇ ಹಣ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಕೆ.ಎನ್. ಗೋಪಾಲಸ್ವಾಮಿರವರು ನಿಶಾನೆ ಪಿ 1 ಮತ್ತು 2 ನ್ನು ಬರೆದುಕೊಟ್ಟಿದ್ದಿದ್ದರೆ ದಾವಾ ಆಸ್ತಿಯನ್ನು ಯಾವ ದಿನಾಂಕದ ಕ್ರಯಪತ್ರದಡಿಯಲ್ಲಿ ಅವರು ಖರೀದಿಸಿದ್ದರೋ ಆ ಕ್ರಯಪತ್ರದ ದಿನಾಂಕವನ್ನು ನಿಶಾನೆ ಪಿ 1 ಮತ್ತು 2 ರಲ್ಲಿ ನಮೂದು ಮಾಡುತ್ತಿದ್ದರು ಮತ್ತು ಹಾಗೆ ನಮೂದು ಮಾಡದೆ ಇರುವ ಕಾರಣ ನಿಶಾನೆ ಪಿ 1 ಮತ್ತು 2 ನಾನು ಮತ್ತು ಸಾಕ್ಷಿಗಳು ಹಾಗೂ ಪತ್ರ ಬರಹಗಾರರು ಸೃಷ್ಟಿಸಿರುವ ದಾಖಲೆಗಳು ಎಂದರೆ ಸರಿಯಲ್ಲ. ನಿಶಾನೆ ಪಿ 1 ರಲ್ಲಿರುವ ಕ್ರಯದ ಕರಾರು ಪತ್ರದಲ್ಲಿ ಹಣವನ್ನು ಯಾವ ಉದ್ದೇಶಕ್ಕಾಗಿ ಪಡೆದುಕೊಳ್ಳಲಾಗುತ್ತಿದೆ ಎಂದು ಬರೆದಿರುವ ಕಾರಣ ನಿಶಾನೆ ಪಿ 2 ರಲ್ಲಿನ ಪೂರಕ ಕ್ರಯದ ಕರಾರು ಪತ್ರದಲ್ಲಿ ರೂ.1,00,000/- ಹಣವನ್ನು ಯಾವ ಉದ್ದೇಶಕ್ಕಾಗಿ ನೀಡಲಾಗಿದೆ ಎಂದು ಪುನಃ ನಮೂದು ಮಾಡುವ ಅವಶ್ಯಕತೆ ಇರದೆ ಇದ್ದ ಕಾರಣ ನಮೂದು ಮಾಡಿಲ್ಲ. ಕೆ.ಎನ್ ಗೋಪಾಲಸ್ವಾಮಿರವರಿಂದ ಖಾಲಿ ಹಾಳೆಗಳಿಗೆ ಸಹಿ ಪಡೆದುಕೊಂಡು ನಿಶಾನೆ ಪಿ 1 ಮತ್ತು 2 ನ್ನು ಸೃಷ್ಟಿ ಮಾಡಿರುವ ಕಾರಣ ನಿಶಾನೆ ಪಿ 2 ರಲ್ಲಿ ಉದ್ದೇಶವನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ 2 ರಲ್ಲಿನ ಪೂರಕ ಕ್ರಯದ ಕರಾರು ಪತ್ರದ ದಿನಾಂಕದಿಂದ 3 ವರ್ಷದ ಒಳಗೆ ನೋಟೀಸು ನೀಡುವಷ್ಟರಲ್ಲಿ ಕೆ.ಎನ್ ಗೋಪಾಲಸ್ವಾಮಿರವರೇ ತೀರಿಕೊಂಡಿದ್ದರು, ಆ ಕಾರಣದಿಂದ ನೋಟೀಸು ನೀಡಲಿಲ್ಲ. ನಿಶಾನೆ ಪಿ 2 ರಲ್ಲಿ ನಮೂದು ಮಾಡಿರುವ 6 ತಿಂಗಳ ಅವಧಿಯ ಒಳಗೆ ಕೆ.ಎನ್ ಗೋಪಾಲಸ್ವಾಮಿರವರಿಗೆ ನೋಟೀಸು ನೀಡಿಲ್ಲ. ನಿಶಾನೆ ಪಿ 2 ಸೃಷ್ಟಿತ ಪತ್ರ ಆಗಿರುವ ಕಾರಣ ಕೆ.ಎನ್ ಗೋಪಾಲಸ್ವಾಮಿರವರಿಗೆ 6 ತಿಂಗಳ ಒಳಗೆ ನೋಟೀಸು ನೀಡಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ 1 ಮತ್ತು 2 ಸೃಷ್ಟಿತ ದಾಖಲೆಗಳಾಗಿರುವ ಕಾರಣ ಪ್ರತಿವಾದಿಗಳನ್ನು ಕ್ರಯಪತ್ರ ಬರೆದುಕೊಡುವಂತೆ ಕೇಳಿರುವುದು ಕಾನೂನು ಸಮ್ಮತವಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸರ್ವೆ ನಂ. 43/2 ಚಕ್ಕುಬಂದಿಃ ದಕ್ಷಿಣಕ್ಕೆ ರಸ್ತೆ, ಉತ್ತರಕ್ಕೆಃ ಲಿಂಗರಾಜುರವರ ಸ್ವತ್ತು, ಪೂರ್ವಕ್ಕೆಃ ಕೆ.ಎನ್ ಗೋಪಾಲಸ್ವಾಮಿರವರ ಉಳಿದ ಸ್ವತ್ತು, ಪಶ್ಚಿಮಕ್ಕೆಃ ಕೆ.ಎನ್

ಗೋಪಾಲಸ್ವಾಮಿರವರ ಮತ್ತು ಜಯರಾಮುರವರ ಸ್ವತ್ತು. ಕೆ.ಎನ್ ಗೋಪಾಲಸ್ವಾಮಿರವರು ನನಗೆ ಯಾವುದೇ ಕ್ರಯದ ಕರಾರು ಪತ್ರ ಮತ್ತು ಪೂರಕ ಕ್ರಯದ ಕರಾರು ಪತ್ರವನ್ನು ಬರೆದುಕೊಡದೆ ಇದ್ದರೂ ಸಹ ನಾನು ಅವರ ಸಂಬಂಧಿಯಾಗಿರುವ ಕಾರಣ ದಾವಾ ಆಸ್ತಿಯ ವಿವರಗಳನ್ನು ತಿಳಿದುಕೊಂಡು ಕೆ.ಎನ್ ಗೋಪಾಲಸ್ವಾಮಿರವರು ನನ್ನಿಂದ ವೈಯಕ್ತಿಕ ಸಾಲ ಪಡೆದುಕೊಂಡಾಗ ಅವರಿಂದ ಖಾಲಿ ಹಾಳೆಗಳ ಮೇಲೆ ಸಹಿ ಮಾಡಿಸಿಕೊಂಡಿದ್ದನ್ನು ದುರುಪಯೋಗಪಡಿಸಿಕೊಂಡು ನಿಶಾನೆ ಪಿ 1 ಮತ್ತು 2 ನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸೃಷ್ಟಿತ ದಾಖಲೆಗಳ ಮೇಲೆ ಹೂಡಿರುವ ಈ ದಾವೆಯು ಊರ್ಜಿತವಲ್ಲದಿದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಪ್ರಮಾಣಪತ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಪಿ 1 ಮತ್ತು 2 ಸೃಷ್ಟಿತ ದಾಖಲೆಗಳಾಗಿರುವ ಕಾರಣ ಕೆ.ಎನ್ ಗೋಪಾಲಸ್ವಾಮಿರವರು ಬದುಕಿದ್ದಾಗ ಅವರಿಗೆ ಯಾವುದೇ ನೋಟೀಸು ನೀಡದೆ ಮತ್ತು ಅವರ ವಿರುದ್ಧ ಕೇಸು ಹಾಕದೆ ಅವರು ಸತ್ತ ನಂತರ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ನೋಟೀಸು ನೀಡಿ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಆದುದರಿಂದ ದಾವೆಯಲ್ಲಿ ಕೋರಿರುವ ಪರಿಹಾರಗಳಿಗೆ ನಾನು ಕಾನೂನು ಪ್ರಕಾರ ಅರ್ಹಳಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಪಾಂಡವಪುರ**